ನಗರ ಡಿವೀಜ್ಞ.

ತಾರೀಖು 10ನೇ ಡಿಸಂಬರ್ 1883.

ಇದರಿಂದ ಪ್ರಕಟಪಡಿಸುವದೇನಂದರೆ, ಸ್ ೧೮೮೪ನೇ ಇಸವಿಯಲ್ಲಿ ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟುಗಳಿಂದ ಕಮಿಟ್ ಮಾಡೋಣಾಗುವ ಕ್ರಿಮಿನಲ್ ಮೊಕದ್ದಮೆಗಳ ಸೆಷನ್ಸ್ ವಿಚಾರಣೆಯು, ಆಯಾ ಡಿಸ್ಟ್ರಿಕ್ಟುಗಳ ಹೆಡ್ ಕ್ವಾರ್ಟರ್‌ಗಳಲ್ಲಿ ಈ ಕೆಳಗೆ ನಮೂದಿಸಿರುವ ತಾರೀಖುಗಳಲ್ಲಿ ನಡಿಸಲ್ಪಡುವದು.

ಶಿವಮೊಗ್ಗಾ ಡಿಸ್ಟ್ರಿಕ್ಟು.	ಕಡೂರು ಡಿಸ್ಟ್ರಿಕ್ಟು.
7ನೇ ಜನವರೀ 1884	11ನೇ ಫಿಬ್ರವರೀ 1884
10ನೇ ಮಾರ್ಚಿ 1884	19ನೇ ಮೇ 1884
7ನೇ ಏಪ್ರೆಲ್ 1884	11ನೇ ಆಗಸ್ಟು 1884
9ನೇ ಜೂ 1884	10ನೇ ನವಂಬರ್ 1884
7ನೇ ಜೂಲೈ 1884	
8ನೇ ಶಪ್ಟಂಬರ್ 1884	
6ನೇ ಅಕ್ಟೋಬರ್ 1884	
8ನೇ ಡಿಸಂಬರ್ 1884	

ವಿಚಾರಣೆ ಬಗ್ಯೆ ಮೊಕ್ಕದಮೆಗಳನ್ನು ಕಮ್ಮಿಟ್ ಮಾಡುವದಕ್ಕೆ ಅಧಿಕಾರವುಳ್ಳ ತವುಂ ಮಾಜಿಸ್ಟ್ರೇಟುಗಳೂ ಅವರು ಕಮ್ಮಿಟ್ ಮಾಡೋಣಾಗುವ ಮೊಕ್ಕದಮೆಗಳಿಗೆ ಸಂಬಂಧಪಟ್ಟ ಫಿರಿಯಾದಿಗಳನ್ನು ಮತ್ತು ಸಾಕ್ಷಿಗಳನ್ನು ಆಯಾ ಡಿಸ್ಟ್ರಿಕ್ಟುಗಳ ಹೆಡ್‌ಕ್ವಾರ್ಟರ್‌ಗಳಲ್ಲಿ ಈ ಕೋರ್ಟಿನ ಮುಂದೆ ಸದರೀ ತಾರೀಖುಗಳಲ್ಲಿ ಹಾಜರಾಗುವಂತೆ ಸರ್ಮುಮಾಡಿ ಮುಚ್ಚಳಿಕೆ ತೆಗದುಕೊಳ್ಳಬೇಕೆಂದು ಕೇಳಿಕೊಳ್ಳಲ್ಪಟ್ಟಿರುತ್ತಾರೆ.

ಟಿ. ನರಹರಿರಾವ್,
ಸೆಷೆನ್ಸ್ ಜಡ್ಜ್.

ಕಡೂರು ಡಿಸ್ಟ್ರಿಕ್ಟು.

ಕಡೂರು ಡಿಸ್ಟ್ರಿಕ್ಟು ಸೆಬಾರ್ಡಿನೇಟ್ ಜಡ್ಜ್ರೀಯವರ ಕೋರ್ಟಿನಲ್ಲಿ.

1883ನೇ ಇಸವಿ ಮಿಸಲೇನಿಯಸ್ ಕೇಸ್ ನಂಬರ್ 98.

ಮೃತಪಟ್ಟ ಕೃಷ್ಣಯ್ಯಂಗಾರ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಅಳಸಿಂಗ್ಯಾಚಾರ್ಯ, ಮೃತಪಟ್ಟ ಸದರೀ ಕೃಷ್ಣಯ್ಯಂಗಾರ್ರಿಗೆ ಅಂಣನ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಮಗಳೂರು ತಾಲ್ಲೂಕು ಈಶ್ವರವಳ್ಳಿ ಸ್ಥಳದ ಅಳಸಿಂಗ್ಯಾಚಾರ್ಯನು, ಈಶ್ವರವಳ್ಳಿ ವಾಸಸ್ಥನಾಗಿ ಮೃಪಟ್ಟ ಸದರೀ ಕೃಷ್ಣಯ್ಯಂಗಾರನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಅಳಸಿಂಗ್ಯಾಚಾರ್ಯನ ಅರ್ಜಿಯನ್ನು 1884ನೇ ಇಸವಿ ಜನವರೀ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಆದರಿಂದ ತಿಳಿಯಪಡಿಸಿ ಇದೆ.

1883ನೇ ಇಸವಿ ಡಿಸಂಬರ್ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1883ನೇ ಮಿಸಲೇನಿಯಸ್ ಕೇಸ್ ನಂಬರ್ 110.

ಸಿವಿಲ್ ಪ್ರೊಸಿಜ್ಯೂರ್ ಕೋಡ್ 20ನೇ ಅಧ್ಯಾಯದಲ್ಲಿ ನಮೂದಾಗುವ ವಿಷಯದಲ್ಲಿಯೂ ಮತ್ತು ಬೇಲೂರ ತಾಲ್ಲೂಕು ಮಲ್ಲಾಪುರದ ಮಠದಲ್ಲಿ ಯಿರುವ ಮಲ್ಲಿಕಾರ್ಜುನ ವಡೇರ ಅರ್ಜೀ ವಿಷಯುಲ್ಲಿಯು ಸಹ.

ಮೇಲಿಕಂಡ ಅರ್ಜೀದಾರ 1883ನೇ ಡಿಸಂಬರ್ 20ನೇ ತಾರೀಖಿನಲ್ಲಿ ಈ ಕೋರ್ಟಿಗೆ ಕೊಟ್ಟ ಅರ್ಜಿಯು ಸಿವಿಲ್ ಪ್ರೊಸಿಜ್ಯೂರ್ ಕೋಡ್ 20ನೇ ಅಧ್ಯಾಯದಲ್ಲಿ ನಮೂದಾಗುವ ಉದಹರಣೆಗಳ ಪ್ರಯೋಜನವನ್ನು ಕೊಂದುವದರ ಮೂಲಕ ಸದರೀ ಕೋಡ್ 351ನೇ